# ಅನುಪಮಾ ನಿರಂಜನ ಮತ್ತು ತ್ರಿವೇಣಿಯವರ ಕಥೆಯಲ್ಲಿ ಮಹಿಳೆಯ ಪಾತ್ರ

ರೇವತಿ ಬಿ. ಶಿರನಾಳ

Received: 15/10/2024 ; Acepted: 01/11/2024 ; Published: 30/11/2024

DOI: https://doi.org/10.5281/zenodo.14246680

## ABSTRACT:

ನಮ್ಮ ನಾಡು ಸುಸಂಸ್ಕೃತವಾದ ತಾಣ ನಮ್ಮ ಮಹಾಕಾವ್ಯವಾದ "ರಾಮಾಯಣದಲ್ಲಿ" ಒಂದು ಶ್ಲೋಕ ಬರುತ್ತದೆ ಅದು "ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ" ಅಂತ ಸಂಸ್ಕೃತ ಶ್ಲೋಕ ತಾತ್ಪರ್ಯ ನೋಡುವುದಾದರೆ "ತಾಯಿ ಮತ್ತು ಮಾತೃಭೂಮಿ ಸ್ವರ್ಗಕ್ಕಿಂತ ದೊಡ್ಡದು" ಎಂದು ಅರ್ಥ. ಇದನ್ನು ಅರಿತ ಸ್ತ್ರೀ ನಮ್ಮ ಸಮಾಜದಲ್ಲಿ ಪುರುಷರಿಗೆ ಗೌರವಿಸುವುದು. ಒಂದು ಧರ್ಮ ಮತ್ತು ಕರ್ತವ್ಯ. ಹಾಗಾಗಿ ನಮ್ಮ ಸಮಾಜ ಪುರುಷ ಪ್ರಧಾನವಾಗಿ ನೋಡುತ್ತದೆ. ಸಹಜವಾಗಿ ಸ್ತ್ರೀಯು ಕೂಡಾ ಪ್ರಧಾನವಾಗಿ ನೋಡುವುದು ಅವಳ ವಿಶಾಲ ಮನೋಭಾವವಾಗುತ್ತದೆ. ಜೊತೆಗೆ ಕುಟುಂಬವನ್ನು ಜವಾಬ್ದಾರಿಯುತವಾಗಿ ನಿಭಾಯಿಸುವ ಆದ್ಯ ಕರ್ತವ್ಯಗಳನ್ನು ಈ ಕಥೆಗಳಲ್ಲಿ ನಾವು ಕಾಣುತ್ತೇವೆ. ತನ್ನ ಆಸೆ ಆಕಾಂಕ್ಷೆಗಳು ಬದಿಗೆ ಸರಿಸಿ ತನ್ನ ಪರಿವಾರವನ್ನು ಪ್ರೀತಿ, ಮಮತೆ, ವಾತ್ಸಲ್ಯದಿಂದ ಪಾಲಿಸುವ ಪೋಷಿಸುವ ಮಾತೃಮಯಿ ಸ್ತ್ರೀಯ ಕುರಿತು ಇರ್ವರು ಲೇಖಕಿಯರ ಕಥೆಗಳಲ್ಲಿ ಕಾಣುತ್ತೇವೆ.

## KEYWORDS:

ಮಹಿಳಾ ಪಾತ್ರ, ಸಣ್ಣ ಕತೆಗಳು, ವಸಾಹತುಶಾಹಿ, ಮಾನಸಿಕ ದಾಸ್ಯ, ಮಹಿಳಾ ಸ್ವಾತಂತ್ರ್ಯ.

ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ ಹಿನ್ನೆಲೆಯಲ್ಲಿ ಕನ್ನಡ ಮಹಿಳಾ ಸಾಹಿತ್ಯವನ್ನು ಗುರುತಿಸುವ ವಿಶ್ಲೇಷಿಸುವ ಕಾರ್ಯ ಸುಲಭವಲ್ಲ.

ಸ್ವರಸಮೃದ್ಧಯಾಳದಲ್ಲಿ ಮಿಡಿಯುವ ಜೀವನಾಡಿಗೆ ಕಿವಿಗೊಡುವ ಕಾರ್ಯ ಮಹಿಳಾ ಕಥಾ ಸಾಹಿತ್ಯದಲ್ಲಿದೆ. ಸಮಾಜ – ಸಂಸ್ಕೃತ – ಸಾಹಿತ್ಯವನ್ನು ಕುರಿತು ಆಲೋಚನೆಗಳು ಸ್ಪಷ್ಟವಾಗಿ ಎರಡು ಬಗೆಗಳಲ್ಲಿ ಪ್ರಕಟಗೊಂಡವು.

1. ಪುನರುತ್ಥಾನದ ಮಾದರಿ
2. ವಿಕಾಸವಾದದ ಮಾದರಿ

ವಸಾಹತುದಾಹಿ ಆಡಳಿತಕ್ಕೆದುರಾಗಿ ರೂಪಗೊಂಡ ರಾಜಕೀಯ ಸ್ವರೂಪದ ಹೋರಾಟವು ಪುನರುತ್ಥಾನದ ಮಾದರಿಯು ಆಯ್ಕೆ ಮಾಡಿಕೊಂಡಿತು. ವರ್ತಮಾನದ ತುರ್ತನ್ನು ಹೊಂದಿದ್ದ ಈ ಹೋರಾಟವು – ರಾಷ್ಟ್ರವಾಗಿ ಭಾರತ ತನ್ನ ಅನನ್ಯತೆಯನ್ನು ಸ್ಥಾಪಿಸುವ ಉದ್ದೇಶವುಳ್ಳದ್ದಾಗಿತ್ತು. ಎಂದೆಂದಿಗೂ ನಾಶವಾಗದೆ ಆಂತರಿಕ ಸತ್ವವಾಗಿ ಆತ್ಮರೂಪಿ. ಅಖಂಡ ಭಾರತೀಯ ಸಂಸ್ಕೃತಿಯು ಭವ್ಯವಾದ ಗತಿ ಇತಿಹಾಸವಿತ್ತೆಂದೂ ಆ ಗತ ವೈಭವವನ್ನು ಪುನರುತ್ಥಾನಗೊಳಿಸಬೇಕಾದುದು ಅತ್ಯಗತ್ಯ ಧ್ಯೇಯವು ಹೋರಾಟದ ತಾತ್ವಿಕತೆಯಾಗಿತ್ತು. ಪ್ರತಿಯೊಂದು ಗುಂಪೂ ತನ್ನನ್ನು ವಿಶಿಷ್ಟ. ಶ್ರೇಷ್ಠವಾಗಿಸಿಕೊಳ್ಳುವ ಮಹಿಳೆ ಶುದ್ಧತೆಯನ್ನವಲಂಭಿಸುವಂತೆ. ಸಂಸ್ಕೃತಿಕ ಭಾರತದ ನಿರ್ಮಾಣವು ಮಹಿಳೆಯನ್ನೇ ಕೇಂದ್ರವಾಗಿಸಿಕೊಂಡಿತು.

ಸಂಸ್ಕೃತಿಯ ಪಾಲಕಿ, ಪೋಷಕಿ ಹಾಗೂ ವಾಹಕಿಯಾಗಿ ಮಹಿಳೆ ಇಂಥಹ ಸಂದರ್ಭದಲ್ಲಿ ಮುಖ್ಯಳಾಗುತ್ತಾಳೆ. ರ್‌ಯ ಮಹಿಳೆಯ ಮಾದರಿಯು ಭಾರತೀಯ ಸಂಸ್ಕೃತಿಯ ಶ್ರೇಷ್ಠ ಸೂಚಕವೆಂಬಂತೆ ಪರಿಗಣಿತವಾಯಿತು. ಪುನರುತ್ಥಾನದ ಆಶಯಕ್ಕೆ ಪೂರಕವಾಗಿ ವಿಕಾಸವಾದದ ಮಾದರಿ ಮೂಡಿ ಬಂದಿತು. ವರ್ತಮಾನದ ಸಾಮಾಜಿಕ ಹೋರಾಟದ ತುರ್ತಿಗಿಂತ ಉಜ್ವಲ ಭವ್ಯ ಭವಿಷ್ಯದ ಆಧ್ಯಾತ್ಮಿಕ ನೆಲೆಯ ಆದರ್ಶಗಳನ್ನು ಅರವಿಂದರು ಮುಂತಾದವರು ರೂಪಿಸಿದರು. ಇದು ಸಂಸ್ಕೃತಿಯ ಉತ್ಕಂತೀಯ ಕಲ್ಪನೆಯನ್ನು ಆದರಿಸಿದೆ. ಒಂದು ನಾಗರಿಕ ಸಮಾಜದ ಔನ್ಯತ್ಯವೂ ಆ ಸಮಾಜವು ಮಹಿಳೆಯನ್ನು ಎಷ್ಟರ ಮಟ್ಟಿಗೆ ಗೌರವಿಸುತ್ತೆ ಎಂಬುದರ ಆಧಾರದ ಮೇಲೆ ಇದೆ.

ಸ್ತ್ರೀ ಕೇಂದ್ರಿತ ಉದಾರವಾದಿ (ಉದಾರತಾವಾದಿ ಮಾನವತಾವಾದವು ಯುರೂಪಿನಾದ್ಯಂತ ಪ್ರಚುರಗೊಂಡಿತ್ತು. ವಸಾಹತು ಭಾರತದ ಮಹಿಳೆಯ ದುಃಖ ಸ್ಥಿತಿಯು ಅನಾಗರಿಕತೆಯ ಸೂಚಕ್ಯವೆಂಬ ಬ್ರಿಟೀಷರ ಧೋರಣೆಯು ಪ್ರತಿಭಟನೆಯನ್ನು ಪ್ರಕ್ರಿಯೆಯಾಗಿ ಸ್ತ್ರೀ ಶಿಕ್ಷಣ, ಸತಿಪದ್ಧತಿ ಹಾಗೂ ಬಾಲ್ಯವಿವಾಹ ನಿಷೇಧ ವಿಧಾಯವಿವಾಹದಂತಹ ಸುಧಾರಣಾವಾದಿ ಚಟುವಟಿಕೆಗಳ ಸಾಕಷ್ಟು ಪ್ರಚಾರದೊಂದಿಗೆ ನಡೆದವು. ಅದರೊಂದಿಗೆ ತಮ್ಮ ವಿಷಯದಲ್ಲಿ ಅಂದರೆ ತಮ್ಮ ಮಹಿಳೆಯರ ವಿಷಯದಲ್ಲಿ ಅನ್ಯರ, ಹಸ್ತಕ್ಷೇಪವನ್ನು ಸಹಿಸದ ಮತ್ತು ಮತಾಂತರ ಭೀತಿಯುಳ್ಳ ಸನಾತನವಾದಿಗಳು ಆರ್‌ಯ ಮಹಿಳೆ ಮಾದರಿಯನ್ನು ವೈಭವೀಕರಿಸಿದರು. ಸ್ವಾತಂತ್ರ್ಯಪೂರ್ವ ಸಾಮಾಜಿಕ ಸಂದರ್ಭದ ಪ್ರವೃತ್ತಿ ಪುರುಷ ಹಾಗೂ ಮಹಿಳೆ/ಳಾ ಸಾಹಿತ್ಯಾಭಿವ್ಯಕ್ತಿಗಳ ಹಿಂದಿನ ಸಮಾನ ಪ್ರೇರಣೆ ಹಾಗೂ ಪ್ರಭಾವಗಳಾಗಿದ್ದವು.

ಪುರುಷ ಅಭಿವ್ಯಕ್ತಿಗಿಂತ ಭಿನ್ನವಾಗಿ ಮಹಿಳಾ ಅಭಿವ್ಯಕ್ತಿ ಈ ಪ್ರೇರಣೆ ಹಾಗೂ

ಪ್ರಭಾವಗಳನ್ನು ಹೇಗೆ ದಕ್ಕಿಸಿಕೊಂಡಿತು ಎಂಬುದು ನನಗೆ ಮುಖ್ಯ.

ಆಧುನಿಕ ಕನ್ನಡ ಸಾಹಿತ್ಯದ ಮೊದಲ ಲೇಖಕಿಯಾದ ನಂಜನಗೂಡು ತಿರುಮಲಾಂಬ ಅವರು ಪ್ರಕಾಶಕಿಯಾಗಿ ಪತ್ರಿಕಾ ಸಂಪಾದಕಿಯಾಗಿ, ಸೃಜನ ಶೀಲ ಲೇಖಕಿಯಾಗಿ ಸಮಾಜ ಸೇವಕಿಯಾಗಿ ಹೆಸರು ಪಡೆದವರಾಗಿದ್ದಾರೆ.

"1910 ರಿಂದ 1940ರ ಅವದಿಯವರೆಗೆ 28 ಕೃತಿಗಳು ಅವರು ಬರೆದು ಪ್ರಕಟಿಸಿದರು. ಸ್ತ್ರೀ ಶಿಕ್ಷಣಕ್ಕೆ ದೊರೆತ ಅವಕಾಶವು ಸಾಹಿತ್ಯ ಕ್ಷೇತ್ರಕ್ಕೂ ವಿಸ್ತರಿಸಿದ ಕಾಲಮಾನವದು. ತಿರುಮಲಾಂಬರ ಪ್ರಬಂಧಕ್ಕೆ ಬಹುಮಾನವನತ್ತ 'ಮಧುರವಾಣಿ' ಪತ್ರಿಕೆಯ ಸಂಪಾದಕರು ಸ್ತ್ರೀಯರಿಗಾಗಿ, ಸ್ತ್ರೀ ಕರ್ತೃತ್ವದಿಂದ ಗ್ರಂಥ ಲೇಖನ–ಪ್ರಕಟಕಾರ್ಯ ಅಗತ್ಯವೆಂದು ಅಭಿಪ್ರಾಯ ಹೊಂದಿದ್ದರು. ತಿರುಮಲಾಂಬರ 'ನಭ / ನಭಾ, ವೀರಾಗಿಣಿ, ಸುಶೀಲೆ; ಕಾದಂಬರಿಗಳು ಮೊದಲಿಗೆ ಸತಿ ಹಿತೈಷಿಣಿ ಗ್ರಂಥ, ಗ್ರಂಥ ಮಾಲೆಯಿಂದ ಪ್ರಕಟವಾದವು. ಲೇಖನ ಕಲೆಯಲ್ಲಿ ಮಹಿಳೆಯರು ತೊಡಗುವಂತೆ ಮಾಡುವುದು ಸಾಮಾಜಿಕ ಪ್ರಗತಿಯ ಆಶ್ರಯಕ್ಕೆ ಪೂರಕವೆನಿಸಿದೆ.

ನಮ್ಮ ಸಂಸ್ಕೃತಿಯ ತಾಯಿಬೇರು ಕುಟುಂಬ. ಹೆಣ್ಣಿಗೆ ಗಂಡನ ನೆಲೆಯೇ ನಿಜವಾದ ನೆಲೆ. ಸೊಸೆಯಾಗಿ ಬಂದವಳು ಕುಟುಂಬದ ಹಿತಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕು ಮತ್ತು ನಡೆದುಕೊಳ್ಳಬೇಕು. ಇದು ನಮ್ಮ ಕರ್ತವ್ಯ ಮತ್ತು ಧರ್ಮ. ಒಟ್ಟು ಬದುಕಿನ ಸಾಮರಸ್ಯಕ್ಕಾಗಿ ಸ್ವಹಿತ ಮಹತ್ವಾಕಾಂಕ್ಷೆಗಳನ್ನು ಹತ್ತಿಕ್ಕಿ. ಕುಟುಂಬದ ಒಳಿತಿಗಾಗಿ ಅಭ್ಯುದಯಕ್ಕಾಗಿ ಹೆಣ್ಣು ತ್ಯಾಗ, ಬಲಿದಾನಕ್ಕೂ ಸಿದ್ಧಳಾಗಿರಬೇಕು. ಇದರಲ್ಲಿಯೇ ಅವಳ ಬಾಳಿಗೆ ಬೆಲೆಯಿದೆ ಎಂಬ ಕಟುಸತ್ಯದ ನೀತಿಬೋಧೆಯೇ ಅವರ ಸಾಹಿತ್ಯ.

ಆದರೀಗ ಪರಿಸ್ಥಿತಿ ಮೊದಲಿನಂತಿಲ್ಲ. ಬದಲಾಗಿದೆ. ಇದಕ್ಕೆ ಕಾರಣ ನಮ್ಮ ದೇಶದಲ್ಲಾದ ಔದ್ಯೋಗಿಕ ಕ್ರಾಂತಿ ತತ್ಪರಿಣಾಮವಾಗಿ ಜನಜೀವನದಲ್ಲಾದ ತೀವ್ರತರ ಬದಲಾವಣೆ ಬಡ ಮತ್ತು ಮಧ್ಯಮವರ್ಗದ ನಿರ್ಮಾಣ. ಮಹಿಳಾ ಸ್ವಾವಲಂಬಿ ಜೀವನಕ್ಕೆ ಪ್ರೇರಣೆ ನೀಡಿದೆ. ಮಹಿಳಾ ಶಿಕ್ಷಣಕ್ಕೆ ಪ್ರಾಶಸ್ತಿ ದೊರೆತಿದೆ. ಉಚ್ಚ ಶಿಕ್ಷಣ ಪಡೆದು ಉನ್ನತ ಹುದ್ದೆ ಹೊಂದಬೇಕೆಂಬ ಆಕಾಂಕ್ಷೆ ಪ್ರಬಲವಾಗುತ್ತಿದೆ. ಸಮಾಜದಲ್ಲಿ ಮಂದಗತಿಯಲ್ಲಾದರೂ ಅದಕ್ಕೆ ಪ್ರೋತ್ಸಾಹ ಮನ್ನಣೆ ದೊರೆಯುತ್ತಿದೆ. ಇಂತಹ ಬದಲಾವಣೆ ವಾತಾವರಣದ ಜೀವನ ವಿಧಾನ, ಯೋಚನೆ, ಚಿಂತನೆಗಳು ಬೇಗವಾಗಿ ಬದಲಾಗುತ್ತಿವೆ. ಭಾವೀಪತಿಯ ಎದುರು ಭಾವೀ ಸತಿ ಮಾತನಾಡತೊಡಗಿದ್ದಾಳೆ. ತನ್ನ ಇಚ್ಛೆ–ನಿರ್ಧಾರಗಳನ್ನು ಆತನೊಂದಿಗೆ ಹಂಚಿಕೊಳ್ಳಲಾರಂಭಿಸಿದ್ದಾಳೆ. ಗಂಡನೊಂಗೆ ಹೆಂಡತಿಯಾದವಳು ಯಾವಾಗಲೂ ಹೊಂದಿಕೊಂಡು ಹೋಗಬೇಕು ಎಂದು ಉಪದೇಶಿಸುವವರೆಗೆ ಆತನೂ ಏಕೆ ಹೊಂದಿಕೊಂಡು ಹೋಗಬಾರದು?

ಎಂದು ಪ್ರಶ್ನಿಸುವಷ್ಟರ ಮಟ್ಟಿಗೆ ಸ್ಥೈರ್ಯ ತೋರುತ್ತಿದ್ದಾರೆ.

ಒಟ್ಟಾರೆ ಮಹಿಳೆ ಮಾನಸಿಕ ದಾಸ್ಯದಿಂದ ಮುಕ್ತಳಾಗುತ್ತಿದ್ದಾಳೆ. ಜೊತೆಗೆ ಸ್ವಾವಲಂಬಿಯಾಗುವುದರೊಂದಿಗೆ ಸ್ವಾಭಿಮಾನಿಯೂ ಆಗುತ್ತಿದ್ದಾಳೆ. ಅಂತಹ ಮನೋಭಾವದ ಮಹಿಳೆಯ ಪಾತ್ರ ಚಿತ್ರಣ ಮಹಿಳಾ ಸಾಹಿತ್ಯದಲ್ಲಿಯೂ ಬಂದಿದೆ. ಇದು ಗಮನಾರ್ಹದ ಸಂಗತಿಯೂ ಹೌದು.

ಉದಾರಣೆಗೆ ಆಯ್ದುಕೊಂಡ ಕೃತಿಗಳು ಶ್ರೀಮತಿ ತ್ರೀವೇಣಿ ಅವರ 'ಬಾನು ಬೆಳಗಿತು' 1963 ಮತ್ತು ಅನುಪಮಾ ನಿರಂಜನರವರ 'ಹಿಮದ ಹೂ' 1966. ಇವರ ಈ ಎರಡೂ ಕಾದಂಬರಿಗಳಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ನೆಲೆಯನ್ನು ಕುರಿತಂತೆ ಆಯಾ ಲೇಖಕಿಯರು ತಳೆದ ಒಲವು-ನಿಲುವ ಕುರಿತು ವಿವೇಚಿಸಲಾಗಿದೆ.

ಇಲ್ಲಿ ನಮ್ಮ ಗಮನಕ್ಕೆ ಬರುವ ಸಾಮಾನ್ಯ ಅಂಶಗಳು ಕಥಾ ನಾಯಕಿಯರು ಪರಸ್ಪರ ಮೆಚ್ಚಿ ಹಿರಿಯರ ಅನುಮತಿಯೊಂದಿಗೆ ಮದುವೆ ಆಗುತ್ತಾರೆ. ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಂಡು ವ್ಯಕ್ತಿ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯ ನೀಡಿದ ಸ್ವಾಭಿಮಾನಿ ಪದವೀಧರೆಯರು. ಇರ್ವರ ಉದ್ದೇಶ ದುಡಿಯಬೇಕೆಂಬುದು ಆದರೆ ಅವರ ಹಿಂದಿರುವ ಅಭಿಪ್ರಾಯಗಳು ಮಾತ್ರ ಬೇರೆ-ಬೇರೆಯಾಗಿವೆ.

ತ್ರೀವೇಣಿಯವರ ಬಾನು ಬೆಳಗಿತು ಕಾದಂಬರಿ ನಾಯಕಿ ಕಲ್ಯಾಣಿ ಯಾವ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳದ ಸ್ವಭಾವದವಳು, ಮುಗ್ಧೆ. ಮದುವೆಯಾದ ಮೇಲೆ ಮನೆಯಲ್ಲಿ ಕೆಲಸವಿಲ್ಲದೆ ಹೇಗೋ ದಿನ ನೂಕುತ್ತಿರುವವಳಿಗೆ ವರ್ತಮಾನ ಪತ್ರಿಕೆಯಲ್ಲಿ ಬೇಕಾಗಿದೆ ಎಂಬ ಜಾಹೀರಾತು ಕಣ್ಣಿಗೆ ಬೀಳುತ್ತದೆ. ಆಗ, ತಾನೇಕೆ ಉದ್ಯೋಗ ಮಾಡಬಾರದು ಎಂಬ ವಿಚಾರ ಮೂಡುವುದು. ಅಲ್ಲದೆ ಪ್ರತಿಯೊಂದಕ್ಕೂ ದುಡ್ಡಿಗಾಗಿ ಗಂಡನ ಮುಂದೆ ಕೈ ಒಡ್ಡುವುದು ಮುಜುಗರವನ್ನುಂಟು ಮಾಡುತ್ತದೆ. “ಕೊನೆಗೆ ತಾನು ಸ್ನೋ ಪೌಡರಿಗೂ ತಾನು ಗಂಡನಮುಂದೆ ಕೈ (ಹಣ ಕೇಳಬೇಕು) ಚಾಚಬೇಕು. ಅದೇ ತಾನೇ ಸಂಪಾದಿಸಿದರೆ/ತನ್ನ ಹಣವನ್ನು ತನಗೀಷ್ಟ ಬಂದ ಹಾಗೆ ಖರ್ಚು ಮಾಡಬಹುದು ಎಂಬ ವಿಚಾರವೇ ಮನಸ್ಸಿಗೆ ಖುಷಿ ನೆಮ್ಮದಿ ಕೊಡುತ್ತದೆ. ತನ್ನ ಗಂಡನಿಗೆ ಈ ವಿಚಾರ ತಿಳಿಸಿದರೆ ಅವರೇನು ಅದಕ್ಕೆ ಅಡ್ಡಿ ಬರುವುದಿಲ್ಲ; ತಪ್ಪಾಗಿ ಭಾವಿಸುವುದಿಲ್ಲ ಎಂಬ ಭ್ರಮೆಯಿಂದ ಸ್ವಂತ ನಿರ್ಧಾರ ತೆಗೆದುಕೊಳ್ಳುತ್ತಾಳೆ. ಹಾಗೆಯೇ ಕುಟುಂಬದಲ್ಲಿ

ಸ್ತ್ರೀ ಸಂವೇದನೆ ಕುರಿತಂತೆ ಪುರುಷರ ಪ್ರಧಾನ ವ್ಯವಸ್ಥೆಯ ನೈಜ ಸ್ವರೂಪಗಳ ಹಲವು ಮಗ್ಗಲುಗಳನ್ನು ಬೆಳಕಿಗೆ ತರುವುದು ಈ ಲೇಖನದ ಉದ್ದೇಶಗಳಲ್ಲಿ ಒಂದಾಗಿದೆ.

ದುಡಿಯಲು ಆರಂಭಿಸಿದ ಮೊದಮೊದಲು ಹೊಸತನದಲ್ಲಿ ಎಲ್ಲವೂ ಸರಿಯಾಗಿಯೇ ಇರುವುದು. ಕ್ರಮೇಣ ದಿನಗಳೆದಂತೆ ಕ್ರಮೇಣವಾಗಿ ತನ್ನ ನೌಕರಿಯಕಡೆಗೆ ಲಕ್ಷ್ಯ ಗಮನ ಕೇಂದ್ರಕೃತವಾಗಿ ಗೃಹ-ಕೃತ್ಯಗಳಲ್ಲಿ ವ್ಯತ್ಯಯವಾಗುವುದು. ಹಿರಿಯರ ಗೋಣಗಾಟ. ಪತಿಯ ಬಿಗುಮುಖ. ಮೌನ ಎಲ್ಲವೂ ಎದುರಿಸಬೇಕಾಗಿರುವುದು ಸ್ವಾಭಾವಿಕ. ಇಲ್ಲಿ ಗಮನಿಸಬೇಕಾಗುವಂಥದ್ದು ಈ ಸನ್ನಿವೇಶಕ್ಕೆ ಕಾರಣವಾದ ಮಹತ್ವದ ಅಂಶವೆಂದರೆ ನಾಯಕರಾದ ರಾಮನಾಥ ಮತ್ತು ಶೇಖರ ಇಬ್ಬರು ಹೆಂಡತಿಯರು ಹೊರಗೆ ಹೋಗಿ ದುಡಿಯುವ ಅವಶ್ಯಕತೆಯೇನಿದೆ? ತಾವು ದುಡಿದುದು ಒಂದು ಕುಟುಂಬ ನಿರ್ವಹಣೆಗೆ ಸಾಕು ಎಂಬ ಮನೋಧೋರಣೆಯವರಾಗಿದ್ದರು. ಎಲ್ಲ ಹಿರಿಯರದ್ದು ಇದೇ ಅಭಿಪ್ರಾಯವಿರುತ್ತದೆ.

ಪತಿಯ ಸಹಕಾರದ ಮನೋಭಾವದ ಕೊರತೆಯಿಂದಾಗಿ ಸ್ವಭಾನಿಯಾದ ಹೆಣ್ಣು ನಲುಗುವುದು, ಸಿಡಿದೇಳುವುದು ಸಹಜ. ಕ್ರಮೇಣ ಸಂದರ್ಭ ತಿಳಿಯಾಗಿ. ನೈಜಸ್ಥಿತಿಯು ಅರಿವು ಅವಳಲ್ಲಿ ಮೂಡುತ್ತದೆ. ಹೆಣ್ಣಾದವಳು ಮಕ್ಕಳಿಗೆ ತಾಯಿಯಾಗಿ, ಗಂಡನಿಗೆ ಒಲವಿನ ಹೆಂಡತಿಯಾಗಬೇಕು. ಇಲ್ಲದಿದ್ದರೆ ಮನೆಯ ವ್ಯವಸ್ಥೆ ಕೆಡುತ್ತದೆ. ಪತಿಯ ಪ್ರೇಮದಿಂದ ವಂಚಿತಳಾಗಿ ಒಂಟಿಯಾಗುವ ಭಯ ಆವರಿಸುತ್ತದೆ.

ಮಾತೃಮೌಲ್ಯದಿಂದ ವಂಚಿತರಾಗಿ ದೂರಾಗುವ ಮಕ್ಕಳು ದಾಂಪತ್ಯದಲ್ಲಿ ವಿರಸ. ಆ ಅಗಲುವಿಕೆಯ ನೋವು ಅಸಹಕಾರ ಸ್ಥಿತಿ- ಇವೇ ಪ್ರಮುಖ ಅಂಶಗಳು ಹೆಣ್ಣನ್ನು ಘಾಸಿಗೊಳಿಸಿ ಪರಿಸ್ಥಿತಿಗೆ ಹೊಂದಿಕೊಳ್ಳುಂತೆ ಮಾಡಿದೆ. ಇದು ಅನಿವಾರ್ಯವಾಗುತ್ತದೆ.

ತವರು ಮನೆ ಸೇರಿದ್ದ ಕಲ್ಯಾಣಿ ಗಂಡನನ್ನು ತೊರೆದು ಬಂದವಳಿಗೆ ತವರಿನಲ್ಲೂ ಸ್ಥಾನವಿಲ್ಲ. ಗೌರವಾದರವಿಲ್ಲವೆಂದು ಮನದಟ್ಟಾಗುತ್ತದೆ. ಹೀಗಾಗಿ ಆತನ ಇಚ್ಛೆಯಂತೆ ನೌಕರಿ ಬಿಟ್ಟು ತನ್ನಿಚ್ಚೆಗೆ ತಿಲಾಂಜಲಿ ಕೊಟ್ಟು ಬಾಳುವುದರಲ್ಲಿಯೇ ಎಲ್ಲರ ಹಿತವಿದೆ. ಅದಕ್ಕೆ ಅವಳು ಬಗ್ಗಬೇಕು ಇಲ್ಲವೇ ಹುಟ್ಟಲಿರುವ ಮಗುವಿನ ಭವಿಷ್ಯದಲ್ಲಿ ಅವಳು ತನ್ನ ಬಾಳಿನ ಸುಖ-ಸಂತೋಷಗಳನ್ನು ಕಾಣುವುದಾಗಿದೆ.

ಹೆಣ್ಣು ಹಿಂದೂ ಸ್ತ್ರೀ ಸೀತೆಯ ಹಾಗೆ ಗಂಡನ ನೆರಳಾಗಬೇಕು ನೀನು ಕಾಲೇಜಿನಲ್ಲಿ ಒಳ್ಳೆ ಹೆಸರು ಪಡೆದಂತೆ ಜನ ನಿನಗೆ ಶಹಭಾಷಗಿರಿ ಕೊಡೋದಿಲ್ಲ. ಮನೇನ ಹೇಗ ನೋಡ್ಕೋತಿ, ಗಂಡ ಮಕ್ಕಳನ್ನು ಹೇಗೆ ಸಂತೋಷವಾಗಿಡ್ತಿ ಅನ್ನೋದು ಮುಖ್ಯ. ಇದೇ ಜೀವನದಲ್ಲಿ ಮುಖ್ಯ. ಇಂತಹ ಸಂಸ್ಕಾರದಲ್ಲಿ ಬೆಳೆದವಳು ದಾಂಪತ್ಯ ಜೀವನದಿಂದ ವಂಚಿತಳಾಗಿ, ಮನೆ ಮುರಿಯುವ ಕೆಲಸ ಮಾಡಲು ಸಾಧ್ಯವೇ? ಮನೆ ಗೆದ್ದು ಮೂರು ಗೆದೆ ಎಂಬ ಮಾತನ್ನು ಅರಿಯದವಳೇ? ಕ್ರಮೇಣ ವಾಸ್ತವತೆಯ

ಅರಿವಾದಾಗ ಮೊದಲಿನ ಛಲ, ಸೆಡವು, ಸ್ವಾಭಿಮಾನ ವ್ಯಕ್ತಿ ಸ್ವಾತಂತ್ರ್ಯ ಎಲ್ಲವೂ ಅನಿವರ್ಯ ಪರಿವರ್ತನೆ ಆಗಿದೆ. ಮನೆಯ ಜವಾಬ್ದಾರಿ ಹೆಣ್ಣಿಗೆ ಹೆಚ್ಚು ಅಂಟಿಕೊಂಡಿರುವುದರಿಂದ ತನ್ನ ಕುಟುಂಬದ ಒಳಿತು ಕೇಡುಗಳೆಲ್ಲ ಅವಳಿಗೆ ಸೇರಿದವು. ಆದಕಾರಣ ಅವಳು ತನ್ನ ಹೃದಯವನ್ನು ವಿಶಾಲಗೊಳಿಸಿಕೊಳ್ಳಬೇಕಾಗುವುದೆಂಬ ನೀತಿಯು ಪರೋಕ್ಷವಾಗಿ ಬಂದಿದೆ.

ಏಕೆಂದರೆ ನಾವು ಹುಟ್ಟಿ-ಬೆಳೆದದ್ದು ಪಂಚಪತಿವ್ರತೆಯರ ನಾಡಿನಲ್ಲಿ ಅಲ್ಲವೇ? ಈಗ ಆಧುನಿಕ ತಂತ್ರಜ್ಞಾನದ ಫಲವಾದ ಯಂತ್ರಗಳು ಮಹಿಳೆಗೆ ಕೆಲಸದ ಹೊರೆಯನ್ನು ಕಡಿಮೆ ಮಾಡಿವೆ. ಮನೆಗೆಲಸದ ಜೊತೆಗೆ ಹೊರೆಗೂ ದುಡಿದು ಸ್ವಾವಲಂಬಿಯಾಗುತ್ತಿದ್ದಾಳೆ. ವಿಜ್ಞಾನದ ಅನ್ವೇಷಣೆಗಳಿಂದ ಮಹಿಳೆ ಕೆಳಮಟ್ಟಿಗೆ ಶೋಷಣೆಯಿಂದ ಮುಕ್ತಳಾಗಲು ಸಾಧ್ಯವಾಗಿದೆ.

ಜೊತೆಗೆ ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶಗಳು ಹೆಚ್ಚಾಗಿ ದೊರೆತು ಅಲ್ಲಿ ಹೆಸರು ಪಡೆದಿದ್ದು ನೋಡಿದ್ದೇವೆ.

ಮಹಿಳೆ ವಿದ್ಯಾರ್ಜನೆಗಾಗಿ ಧಾವಿಸುತ್ತಿರುವುದು ಸಹಜವಾಗಿದೆ. ಅವರಿಗೆ ತಮ್ಮ ಕಲಿಕೆ ವೆಚ್ಚ, ಶ್ರಮ, ಪ್ರತಿಭೆ ವ್ಯರ್ಥವಾಗದಂತೆ ನೋಡಿಕೊಳ್ಳಲು ದುಡಿಯಬೇಕಾದದ್ದು ಅಗತ್ಯ, ಆರ್ಥಿಕ ಸಂಪಾದನೆಗೆ ಅಲ್ಲದೆ ವ್ಯಕ್ತಿತ್ವ ವಿಕಾಸ, ಸಾಮಾಜಿಕ ಜವಾಬ್ದಾರಿಯ ದೃಷ್ಟಿಯಿಂದ ಆಕೆ ದುಡಿಯಲು ಮುಂದಾಗಿದ್ದಾಳೆ. ಇದರ ಪರಿಣಾಮವಾಗಿ ಹೊರ ಜಗತ್ತಿನ ಜ್ಞಾನ ವ್ಯವಹಾರ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಿವೆ. ಮಹಿಳೆ ಎಲ್ಲ ಕ್ಷೇತ್ರದಲ್ಲಿ ಸಂವೇದನಹಂತ ಅಂದರೆ ಜ್ಞಾನ ಅರಿವು ತಲುಪಿದ್ದು ಹೆಮ್ಮೆಯ ಸಂಗತಿಯಾಗಿದೆ. ಆದರೆ ಸ್ತ್ರೀಯು ಸ್ವಾತಂತ್ರ್ಯ ದುರ್ಬಳಕೆ ಮಾಡಿಕೊಳ್ಳದೆ. ಅರಿತು ಜವಾಬ್ದಾರಿಯಿಂದ ನಮ್ಮ ನಡೆ-ನುಡಿ ಕುಟುಂಬಕ್ಕೆ ಧಕ್ಕೆ ಬರದ ಹಾಗೆ ಜೀವನ ನಿರ್ವಹಿಸುವುದಾಗಿದೆ ಇದು ನಮ್ಮ ಸಂಸ್ಕೃತಿಯು ಆಗಿದೆ. ಜೊತೆಗೆ ನಮ್ಮ ಕರ್ತವ್ಯವಾಗಿದೆ.

ಆದರೆ ಇಂದಿನ ಅಂದರೆ ಆಧುನಿಕೋತ್ತರವಾದದ ಮಹಿಳೆ ಪತಿಯ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡು ಪತಿಯನ್ನೇ ಹೆದರಿಸಿ ಜೀವನ ನಡೆಸುವುದು ವಿಪರ್ಯಾಸದ ಸಂಗತಿ. ಕೆಲವು ಕಡೆ ನಾವು ನೋಡುತ್ತಿದ್ದೇವೆ. ಈಗಿನ ಕೆಲ ಪುರುಷರು ಒಂಟಿ ಜೀವನ, ಮಾನಸಿಕವಾಗಿ ಒತ್ತಡದ ಜೀವನ ನಡೆಸುತ್ತಿರುವುದು ವಿಪರ್ಯಾಸ. ಸ್ತ್ರೀ-ಪುರುಷರು ಒಬ್ಬರಿಗೊಬ್ಬರು ಮುಕ್ತತೆಯಿಂದ, ವಿಚಾರ-ವಿನಿಮಯದಿಂದ ಭಾವನೆಗಳನ್ನು ಹಂಚಿಕೊಳ್ಳುವುದರಿಂದ ಯಾವುದೇ ಸಮಸ್ಯೆ ಬಂದು ಒದಗದು ಎಂಬ ಅಭಿಪ್ರಾಯ ನನ್ನದು.

**ಪರಾಮರ್ಶನ ಗ್ರಂಥಗಳು:**

1. ಕೃಷ್ಣ ಎಂ. ಜಿ. (2018). ಕನ್ನಡ ಸಾಹಿತ್ಯದ ಹಿನ್ನಲೆ ಪ್ರೇರಣೆ, ಪ್ರಭಾವ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ. ಮೈಸೂರು.
2. ಶಕುಂತಲಾ ದುರಗಿ (2019). ಮಹಿಳಾ ಸಾಹಿತ್ಯ ಮತ್ತು ಸಂವೇದನೆ.ಸಮನ್ವಯ ಪ್ರಕಾಶನ. ಮೈಸೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.